ದಿನ ದರ್ಶಿಕೆ

ಪಾಲ್ಗುಣ ಮಾಸ, ನಕ್ಷತ್ರ ಸ್ವಾತಿ, ತದಿಗೆ, ಯೋಗ ಹರ್ಷಣ, ಶಕ ಸಂವತ್ಸರ 1945 ಶೋಭಕೃತ್, ಋತು- ಶಿಶಿರ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು

ಕರಿಬೇವಿನ ಸೊಪ್ಪು ಜೀರ್ಣಕ್ರಿಯೆಯನ್ನು ಹೆಚ್ಚಿಸಿ, ಅನಗತ್ಯ ವಿಷ ಪದಾರ್ಥವನ್ನು ದೇಹದಿಂದ ಹೊರ ಹಾಕಲು ಸಹಾಯ ಮಾಡುತ್ತದೆ. ದಿನಾ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಸ್ವಲ್ಪ ಕರಿಬೇವು ತಿಂದರೆ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆಯಾಗುವುದು, ಮೈ ತೂಕವೂ ಇಳಿಯುವುದು.

ಸೌಂದರ್ಯ ಸೂತ್ರ

ಅನಾನಸ್ ಹಣ್ಣಿನ ಚೂರುಗಳನ್ನು ಚರ್ಮದ ಮೇಲೆ ನೇರವಾಗಿ ಉಜ್ಜಿ 20 ನಿಮಿಷಗಳ ಕಾಲ ಹಾಗೆ ಬಿಡಬೇಕು. ನಂತರ ತಣ್ಣಗಿನ ನೀರಿನಲ್ಲಿ ಮುಖ ತೊಳೆದುಕೊಳ್ಳಬೇಕು. ಇದು ಚರ್ಮದ ತೇವಾಂಶವನ್ನು ಕಾಪಾಡುವುದರ ಜತೆಗೆ ಸತ್ತ ಜೀವಕೋಶಗಳನ್ನು ಇಲ್ಲವಾಗಿಸುವುದು.

ದಿನ ಭವಿಷ್ಯ

ಮೇಷ ಇಂದು ತುಂಬಾ ಬಿಡುವಿಲ್ಲದ ದಿನವಾಗಿರುತ್ತದೆ. ಆದರೂ, ನಿಮ್ಮ ಧಾರ್ಮಿಕ ಆಸಕ್ತಿಗಾಗಿ ನೀವು ಸಮಯವನ್ನು ಕಂಡುಕೊಳ್ಳುವಿರಿ

ವೃಷಭ ನಿಂತುಹೋದ ಕಾರ್ಯಗಳು ಮರುಚಾಲನೆ ಪಡೆದುಕೊಳ್ಳುತ್ತದೆ. ನಿಮ್ಮ ಕೋಪವನ್ನು ನಿಯಂತ್ರಿಸಲು ಪ್ರಯತ್ನಿಸಿ.

ಮಿಥುನ ಸಂಗಾತಿಯ ಸಲಹೆಯು ಇಂದು ನಿಮಗೆ ಸಹಾಯ ಮಾಡುತ್ತದೆ ಮತ್ತು ನಿಮ್ಮ ಸ್ನೇಹಿತರ ಬೆಂಬಲವನ್ನು ಸಹ ನೀವು ಪಡೆಯುತ್ತೀರಿ

ಕಟಕ ಈ ದಿನ ಜಾಗರೂಕತೆ ಮತ್ತು ಎಚ್ಚರಿಕೆಯಿಂದ ಬದುಕಬೇಕು. ಸುತ್ತಮುತ್ತಲಿನ ಜನರೊಂದಿಗೆ ಜಗಳವಾಗದಂತೆ ವಿಶೇಷ ಕಾಳಜಿ ವಹಿಸಿ.

ಸಿಂಹ ಕಛೇರಿಯಲ್ಲಿ ಸಕಾರಾತ್ಮಕ ವಾತಾವರಣ. ನಿಮ್ಮೊಂದಿಗೆ ಕೆಲಸ ಮಾಡುವ ಸಹೋದ್ಯೋಗಿಗಳು ಸಹ ಸಂಪೂರ್ಣವಾಗಿ ಸಹಕರಿಸುತ್ತಾರೆ.

ಕನ್ಯಾ ನಿಮ್ಮ ಪ್ರೀತಿಯ ಜೀವನದಲ್ಲಿ ಸಂತೋಷದ ಭಾವನೆ ಇರುತ್ತದೆ. ಖರ್ಚುಗಳನ್ನು ನಿಯಂತ್ರಿಸುವ ಅವಶ್ಯಕತೆಯಿದೆ, ಆರ್ಥಿಕ ಸ್ಥಿತಿ ದುರ್ಬಲ.

ತುಲಾ ಇಂದು ವ್ಯಾಪಾರದ ವಿಷಯದಲ್ಲಿ ಲಾಭವನ್ನು ಪಡೆಯುತ್ತೀರಿ. ದಿನನಿತ್ಯದ ವ್ಯಾಪಾರ ಮಾಡುವವರಿಗೆ ಹೊಸ ಆದಾಯದ ಮೂಲಗಳು ಗೋಚರಿಸುತ್ತವೆ.

ವೃಶ್ಚಿಕ ಭೂಮಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಮಸ್ಯೆ. ಆದರೆ ತಂದೆ ಮಾರ್ಗದರ್ಶನದೊಂದಿಗೆ ಇದರಲ್ಲಿ ಯಶಸ್ಸನ್ನು ಪಡೆಯುತ್ತೀರಿ.

ಧನು ನೀವು ಕುಟುಂಬದ ಆಸ್ತಿ ವಿವಾದವನ್ನು ಎದುರಿಸುತ್ತಿದ್ದರೆ, ಇಂದು ಪರಿಸ್ಥಿತಿಯು ನಿಮ್ಮ ಪರವಾಗಿರುತ್ತದೆ.

ಮಕರ ಕುಟುಂಬದಲ್ಲಿ ಸಂತೋಷ ಮತ್ತು ಶಾಂತಿ ಇರುತ್ತದೆ. ಇಂದು, ಅಧಿಕಾರಿಗಳು ನಿಮ್ಮ ಕೆಲಸದ ಸಾಮರ್ಥ್ಯವನ್ನು ಮೆಚ್ಚುತ್ತಾರೆ.

ಕುಂಭ ಇಂದು ಅನುಕೂಲಕರ ದಿನವಾಗಿರುತ್ತದೆ. ನೀವು ಮಕ್ಕಳಿಂದ ಕೆಲವು ಒಳ್ಳೆಯ ಸುದ್ದಿಗಳನ್ನು ಕೇಳಲಿರುವಿರಿ.

ಮೀನ ಕುಟುಂಬದ ಆಸ್ತಿಯನ್ನು ಪಡೆಯುವ ಬಲವಾದ ಸಾಧ್ಯತೆಗಳಿವೆ. ಕುಟುಂಬದಲ್ಲಿ ಸಂತೋಷ, ಶಾಂತಿ ಮತ್ತು ಸ್ಥಿರತೆಯನ್ನು ಅನುಭವಿಸುವಿರಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- 1954 ಕನ್ನಡ ಸೇರಿದಂತೆ ಹಲವಾರು ಸಿನಿಮಾಗಳಲ್ಲಿ ಅಭಿನಯಿಸಿರುವ ನಟಿ ಮೂನ್ ಮೂನ್ ಸೇನ್ ಜನನ
- 1956- ಪದ್ಮಶ್ರಿ ಪ್ರಶಸ್ತಿ ಪುರಸ್ಕೃತ ಭಾರತೀಯ ವಿಜ್ಞಾನಿ, ಕೈಗಾರಿಕೋದ್ಯಮಿ ಸ್ವಾತಿ ಪಿರಾಮಲ್ ಜನನ
- 1904 - ಬಹುಭಾಷಾ ನಟ, ನಿರ್ದೇಶಕ, ನಿರ್ಮಾಪಕ, ಬರಹಗಾರ, ಹಿನ್ನೆಲೆ ಗಾಯಕ ಚಿತ್ತೂರು ವಿ. ನಾಗಯ್ಯ ಜನನ.

ಚಿತ್ರಸ್ಫೂರ್ತಿ



ಶಿವರಾಮ ಕಾರಂತರ ಆಕರ್ಷಕ ಸ್ನೇಹಿತ ವಲಯ

ತಾತನಿಗೆ ದಿನನಿತ್ಯದ ಹಳೆಯ ಗೆಳೆಯರದ್ದೊಂದು 'ಗ್ಯಾಂಗ್' ಇತ್ತು. ಬಹುಶಃ ಈ ಸಾಧು ಗೆಳೆಯರ ಕೂಟಕ್ಕೆ 'ಗ್ಯಾಂಗ್' ಎಂಬ ಪದ ಬಳಸಿದರೆ ಕಠೋರವಾದೀತು. ಅಷ್ಟು ಸೌಮ್ಯ, ಎಲ್ಲರೂ ಐವತ್ತು ಹಾಗೂ ಅರವತ್ತರಲ್ಲಿದ್ದ ಸ್ನೇಹಿತರ ಕೂಟವದು.



ಭಾಗ 30

ಕಾರಂತರ ಸುಳಿಯಲ್ಲಿ

ಇಂಗ್ಲಿಷ್ ಮೂಲ
ಗ್ರೋಯಿಂಗ್ ಅಪ್ ಕಾರಂತ
ಕೆ. ಉಲ್ಲಾಸ ಕಾರಂತ, ಮಾಲವಿಕಾ ಕಪೂರ್, ಕ್ಷಮಾ ರಾವ್
ಕನ್ನಡಕ್ಕೆ ವಿಶ್ವೇಶ್ವರ ಭಟ್

ಹಿಂದಿನ ಸಂಚಿಕೆಯಿಂದ

ತಾತ ಮತ್ತು ಅವರ ಸಮಕಾಲೀನರು

ಹಾಗೆ ನೋಡಿದರೆ ತಾತ ಏಕಾಂಗಿ. ಬಹಳ ಶಿಸ್ತಿನ ಕಾರ್ಯತತ್ಪರ ಮನುಷ್ಯ. ಸ್ನೇಹ ಸಂಪಾದಿಸಲು ಅವರು ಯಾರನ್ನೂ ಹುಡುಕಿಕೊಂಡು ಹೋಗಿದ್ದಿಲ್ಲ. ಆದರೆ ಅವರ ಅಯಸ್ಕಾಂತದಂತಹ ವ್ಯಕ್ತಿತ್ವ, ಅದ್ಭುತ ಪ್ರತಿಭೆ ಹಾಗೂ ಅವರು ಇದ್ದಕ್ಕಿದ್ದಂತೆ ಸಿಡಿಸುತ್ತಿದ್ದ ಹಾಸ್ಯದ ಹೊನಲು ಸಾಕಷ್ಟು ಸಾಹಿತಿಗಳನ್ನೂ ಹಾಗೂ ಸಮಕಾಲೀನರನ್ನೂ ಅವರಿಗೆ ಸ್ನೇಹಿತರನ್ನಾಗಿಸಿದ್ದವು. ಈ ಗೆಳೆತನ ಜೀವನದ ಕೊನೆಯವರೆಗೂ ಇತ್ತು. ನನಗೆ ಆಶ್ಚರ್ಯವಾಗುವುದೇನೆಂದರೆ, ಹೇಗೆ ತಾತನಿಗಿಂತ ಎಷ್ಟೊಂದು ಭಿನ್ನವಾಗಿದ್ದವರು ಕೂಡ ಅವರಿಗೆ ಸ್ನೇಹಿತರಾಗಿದ್ದರು ಎಂಬುದು. ತಾತ ಎಲ್ಲರನ್ನೂ ತುಂಬಾ ವಿಮರ್ಶಾತ್ಮಕವಾಗಿ ನೋಡುತ್ತಿದ್ದ, ಸ್ವತಃ ತಾನು ಅಗಾಧವಾದುದನ್ನು ಸಾಧಿಸಿದ್ದ ವ್ಯಕ್ತಿ. ಆದರೂ ಬೇರೆ ಬೇರೆ ವಲಯದವರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳುವಲ್ಲಿ ತುಂಬಾ ಮೆತ್ತನೆ ಆಗಿದ್ದರು. ಅಂತಹ ಎಲ್ಲರನ್ನೂ ಪಟ್ಟಿ ಮಾಡುವುದು ನನ್ನಿಂದ ಇಲ್ಲಿ ಸಾಧ್ಯವಿಲ್ಲ. ಹೀಗಾಗಿ ನಾನು ಪ್ರತ್ಯಕ್ಷವಾಗಿ ಕಂಡ ಹಾಗೂ ತಾತನೊಂದಿಗೆ ತುಂಬಾ ಆಳವಾದ ಸಂಪರ್ಕ ಹೊಂದಿದ್ದ ಕೆಲವರನ್ನು ಮಾತ್ರ ಇಲ್ಲಿ ಹೆಸರಿಸುವ ಪ್ರಯತ್ನ ಮಾಡಿದ್ದೇನೆ.

ನನ್ನ ಮನಸ್ಸಿಗೆ ಮೊಟ್ಟಮೊದಲು ಬರುವ ಹೆಸರು ಭಾರತದ ಅತ್ಯಂತ ಪ್ರಸಿದ್ಧ ಚಿತ್ರಕಲಾವಿದರಲ್ಲಿ ಒಬ್ಬರಾದ ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ (ಕೆ.ಕೆ. ಹೆಬ್ಬಾರ್ 1911–1996). ಉಡುಪಿ ಮೂಲದ ಹೆಬ್ಬಾರ್ 1930ರ ದಶಕದಲ್ಲಿ ಮುಂಬೈಗೆ ಹೋಗಿ ಆಧುನಿಕ ಕಲೆಯಲ್ಲಿ ಪ್ರಸಿದ್ಧರಾಗಿದ್ದರು. ತಾತ ಕಲಾಜಗತ್ತಿನ ಬಗ್ಗೆ ತಿಳಿದುಕೊಳ್ಳಲೆಂದು ಮುಂಬೈಗೆ ಹೋದವರು ಹೆಬ್ಬಾರ್ ಜತೆ ಸ್ನೇಹ ಸಂಪಾದಿಸಿ, ಕೊನೆಗೆ ಅವರಿಬ್ಬರೂ ಆತ್ಮೀಯ ಜೀವದ ಗೆಳೆಯರಾಗಿಬಿಟ್ಟರು.

ದೀರ್ಘಾವಧಿ ಸ್ನೇಹಿತ ಗುಂಡುಗುಟ್ಟಿ ಮಂಜುನಾಥಯ್ಯ

ತಾತನ ಇನ್ನೊಬ್ಬರು ದೀರ್ಘಾವಧಿ ಸ್ನೇಹಿತರೆಂದರೆ ಗುಂಡುಗುಟ್ಟಿ ಮಂಜುನಾಥಯ್ಯ (1904–86). ಅವರು ಕೊಡಗಿನ ಬಹಳ ದೊಡ್ಡ ಕಾಫಿ ಪ್ಲಾಂಟರ್. ಜಿ.ಎಂ. ಮಂಜುನಾಥಯ್ಯನವರಿಗೆ ತಾತನ ಬರಹಗಳ ಮೇಲೆ ತುಂಬಾ ಅಭಿಮಾನ. ಜತೆಗೆ ಅವರು ಕೂಡ ತಾತನಂತೆ ಸಮಾಜವಾದ-ವಿರೋಧಿ ರಾಜಕೀಯ ನಿಲುವು ಹೊಂದಿದ್ದರು. ಮಂಜುನಾಥಯ್ಯನವರ ಅಜ್ಜ ಕೊಡಗಿನಲ್ಲಿ ಬ್ರಿಟಿಷ್ ಮಾದರಿಯಲ್ಲಿ ದೊಡ್ಡ ಪ್ರಮಾಣದಲ್ಲಿ ವಾಣಿಜ್ಯಕ ಕಾಫಿ ಬೆಳೆಯಲು ಆರಂಭಿಸಿದ್ದ ದಕ್ಷಿಣ ಭಾರತದ ಮೊದಲ ವ್ಯಕ್ತಿಯಾಗಿದ್ದರು. ಹತ್ತೊಂಬತ್ತನೇ ಶತಮಾನದ ಮಧ್ಯಭಾಗದವರೆಗೆ ಕಾಫಿ ಬೆಳೆ ಸಾಮಾನ್ಯವಾಗಿ ಮನೆಯ ಹಿಂದಿನ ಕೈತೋಟದ ಬೆಳೆಯಾಗಿತ್ತು.

1950ರ ದಶಕದಲ್ಲಿ ಮಂಜುನಾಥಯ್ಯನವರು ಕೊಡಗಿನಲ್ಲೇ ಬಹುಶಃ ದೊಡ್ಡ ಕಾಫಿ ಬೆಳೆಗಾರರಾಗಿದ್ದರು. ಅವರಲ್ಲಿ ಎರಡು ಸಾವಿರಕ್ಕೂ ಹೆಚ್ಚು ಎಕರೆ ಉತ್ಕೃಷ್ಟ ಅರೇಬಿಕಾ ಕಾಫಿ ತೋಟವಿತ್ತು. ಸುಂಟಿಕೊಪ್ಪದ ಬಳಿ ಅವರೊಂದು ಅದ್ಭುತವಾದ ಪಾಶ್ಚಾತ್ಯ ಶೈಲಿಯ ಬಂಗಲೆ ಕಟ್ಟಿಸಿದ್ದರು. ಅದರ ಸುತ್ತ ಹಸಿರೋ ಹಸಿರು. ಮನೆಯ ಅಷ್ಟೂ ದಿಕ್ಕಿನಲ್ಲಿ ಹಸಿರು ಹುಲ್ಲಿನ ಹಾಸು ಹಾಗೂ ಗುಲಾಬಿ ತೋಟಗಳು.

ನಾನು ಗುಂಡುಗುಟ್ಟಿ ಬಂಗಲೆಗೆ ಹೋಗಲು ತುದಿಗಾಲಿನಲ್ಲಿ ನಿಂತಿರುತ್ತಿದ್ದೆ. ಅಲ್ಲಿಗೆ ಹೋದಾಕ್ಷಣ ಮಾಡುತ್ತಿದ್ದ ಮೊದಲ ಕೆಲಸವೆಂದರೆ ಮಹಡಿಯ ಮೇಲಿದ್ದ ಬೃಹತ್ ಲೈಬ್ರರಿಗೆ ಓಡುವುದು. ಮರದ ನೆಲಹಾಸಿನ ಆ ಲೈಬ್ರರಿಯಲ್ಲಿ ವರ್ಷಗಳ ಹಿಂದೆ ಮಂಜುನಾಥಯ್ಯನವರು ಬೇಟೆಯಾಡಿದ ಒಂದು ಚಿರತೆಯ ಟ್ರೋಫಿಯನ್ನು ಇರಿಸಿದ್ದರು. ಅದು ನನಗೆ ಬಹಳ ಇಷ್ಟವಾಗಿತ್ತು. ಹಾಗೆಯೇ ಅವರಲ್ಲಿದ್ದ ಮೂರು ಐಷಾರಾಮಿ ಅಮೆರಿಕನ್ ಕಾರುಗಳು ಕೂಡ ನನ್ನ ಆಕರ್ಷಣೆಯ ಸರಕಾಗಿದ್ದವು; ಒಂದು ಪೋಂಟಿಯಾಕ್, ಇನ್ನೊಂದು ಪ್ಯಾಕರ್ಡ್ ಹಾಗೂ ಮತ್ತೊಂದು ಸ್ಟುಡೆಬೇಕರ್.

ಆ ಬ್ರಿಟಿಷ್ ಶೈಲಿಯ ಬಂಗಲೆಗೆ ಭಿನ್ನವಾದ ಏಕೈಕ ಸಂಗತಿಯೆಂದರೆ ಅಲ್ಲಿನ ಅಡುಗೆ ಮನೆ ಮತ್ತು ದೊಡ್ಡ ಊಟದ ಕೋಣೆ. ಪ್ರತಿನಿತ್ಯ ಮನೆಯವರೆಲ್ಲ ಅಲ್ಲಿ ಒಟ್ಟಿಗೇ ನೆಲದ ಮೇಲೆ ಚಕ್ಕಲಪಟ್ಟೆ ಹಾಕಿ ಕುಳಿತು ಅಪ್ಪಟ ಹವ್ಯಕ ಬ್ರಾಹ್ಮಣರ ಪದ್ಧತಿಯಲ್ಲಿ ಬಾಳೆ ಎಲೆಯ ಮೇಲೆ ಉತ್ಕೃಷ್ಟ ಊಟ ಮಾಡುತ್ತಿದ್ದರು.

ಮಂಗಳೂರಿನ ಖ್ಯಾತ ಉದ್ಯಮಿ ಟಿ ಎಂ ಪೈ ಜತೆ ಕಾರಂತರ ಕುಟುಂಬ

ಮಂಜುನಾಥಯ್ಯನವರ ಪತ್ನಿ ಮೀನಾಕ್ಷಮ್ಮ (1909–94) ನಾಲಗೆ ಬಹಳ ಹರಿತ. ಆದರೆ ಅಷ್ಟೇ ಮೃದು ಹೃದಯಿ. ಈ ದಂಪತಿ ತಾತನಿಗೆ ಬಹಳ ಹತ್ತಿರದ ಸ್ನೇಹಿತರಾಗಿದ್ದರು. 'ಬೆಟ್ಟದ ಜೀವ'ದಂತಹ ಕೆಲ ಆರಂಭಿಕ ಕಾದಂಬರಿಗಳನ್ನು ತಾತ ಬರೆದಿದ್ದು ಅವರ ಮನೆಯಲ್ಲಿ ಉಳಿದುಕೊಂಡಿದ್ದಾಗಲೇ. ಕಾದಂಬರಿ ಬರೆಯುವಾಗ ಅವರು ಆಯಾ ದಿನದ ಕಂತು ಬರೆದು ಮುಗಿದ ಮೇಲೆ ಮಂಜುನಾಥಯ್ಯ ಮತ್ತು ಮೀನಾಕ್ಷಮ್ಮ ದಂಪತಿಗೆ ಓದಿ ಹೇಳುತ್ತಿದ್ದರಂತೆ.

ತಾತನ ಇನ್ನೊಂದು ದೀರ್ಘಾವಧಿ ಗೆಳೆತನವೆಂದರೆ ಮಣಿಪಾಲದ ಪೈಗಳ ಜತೆಗಿನದು. ಮಣಿಪಾಲದ ಪೈ ಕುಟುಂಬ ದಕ್ಷಿಣ ಕನ್ನಡದ ಆ ಸಣ್ಣ ಊರಿನ ಬರಡು ಗುಡ್ಡದ ಮೇಲೆ ಇಂದು ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾದ ಶಿಕ್ಷಣ ಸಂಸ್ಥೆಗಳು ಹಾಗೂ ವಾಣಿಜ್ಯೋದ್ಯಮಗಳನ್ನು ಕಟ್ಟಿ ನಿಲ್ಲಿಸುವ ಮೂಲಕ ಪ್ರಸಿದ್ಧಿ ಪಡೆದಿದೆ.

ದೂರದೃಷ್ಟಿಯ ಸಾಧಕರು

ಮಣಿಪಾಲ ಸಾಮ್ರಾಜ್ಯದ ಸಂಸ್ಥಾಪಕ ಸಹೋದರರು ಉಪೇಂದ್ರ ಪೈ (1895–1956) ಮತ್ತು ಮಾಧವ ಪೈ (1898–1979). ಸಿಂಡಿಕೇಟ್ ಬ್ಯಾಂಕ್, ಹಲವಾರು ಆಸ್ಪತ್ರೆಗಳು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ ದೂರದೃಷ್ಟಿಯ ಸಾಧಕರು. ಅವರು 1950ರ ದಶಕದಲ್ಲಿ ಮೊದಲ ಬಾರಿ ಬಂಡವಾಳ ಆಧಾರಿತ ವೈದ್ಯಕೀಯ ಶಿಕ್ಷಣ ಕಾಲೇಜು ಆರಂಭಿಸುವ ಮೂಲಕ ಹೊಸ ಶೈಕ್ಷಣಿಕ ಮಾದರಿಯೊಂದನ್ನು ಹುಟ್ಟುಹಾಕಲು ಮುಂದಾಗಿದ್ದರು. ಆದರೆ ಮೈಸೂರು ವಿಶ್ವವಿದ್ಯಾಲಯದವರು ಅದಕ್ಕೆ ಬೇಕಾದ ಮಾನ್ಯತೆ ನೀಡಲು ನಿರಾಕರಿಸಿದ್ದರು. ತಾತನಿಗೆ ಅವರ ಸಾಹಿತ್ಯಕ ಹಿನ್ನೆಲೆ ಹಾಗೂ ಕರ್ನಾಟಕದ ಏಕೀಕರಣಕ್ಕಾಗಿ ನಡೆಸಿದ ಹೋರಾಟದ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದಲ್ಲಿ ಸಾಕಷ್ಟು ಸ್ನೇಹಿತರಿದ್ದರು. ಅವರಲ್ಲೊಬ್ಬರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಸಿ.ಸಿ. ಹುಲಕೋಟಿ. ತಾತ ಹಾಗೂ ಪೈ ಸಹೋದರರು ಒಟ್ಟಾಗಿ ಹುಲಕೋಟಿಯವರ ಬಳಿಗೆ ಹೋಗಿ ಈ ಮಾದರಿಯ ಶಿಕ್ಷಣ ಸಂಸ್ಥೆಯ ಮಹತ್ವವನ್ನು ವಿವರಿಸಿದ ಮೇಲೆ ಅವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಮಣಿಪಾಲದ ವೈದ್ಯಕೀಯ ಕಾಲೇಜಿಗೆ ಮಾನ್ಯತೆ ನೀಡಿದ್ದರು. ನಂತರದ್ದು ಎಲ್ಲರೂ ಅರಿತ ಇತಿಹಾಸ.

ಖ್ಯಾತ ಕೈಗಾರಿಕೋದ್ಯಮಿ ವಾಮನ ಕುಡ್ವ

ತಾತನಿಗಿದ್ದ ಇನ್ನೊಬ್ಬ ದೀರ್ಘಾವಧಿ ಸ್ನೇಹಿತರೆಂದರೆ ಮಂಗಳೂರಿನ ಖ್ಯಾತ ಕೈಗಾರಿಕೋದ್ಯಮಿ ವಾಮನ ಕುಡ್ವ (1899–1967). ಇವತ್ತು ಮಂಗಳೂರಿನ ಹೊರಗೆ ಬಹುಶಃ ಯಾರಿಗೂ ಅವರ ಹೆಸರು ನೆನಪಿರುವುದಿಲ್ಲ. ಕುಡ್ವ ಅವರ ಕೆನರಾ ಪಬ್ಲಿಕ್ ಕನ್ವೇಯೆನ್ಸ್ ಕಂಪನಿ (ಸಿಪಿಸಿ) ಅಂದು ದಕ್ಷಿಣ ಭಾರತದಲ್ಲೇ ಅತಿಹೆಚ್ಚು ಬಸ್ ಹಾಗೂ ಟ್ರಕ್‌ಗಳನ್ನು ಹೊಂದಿತ್ತು. ಹಾಗೆಯೇ, ನಿರಂತರ ಸ್ಟೀಲ್ ಕ್ಯಾಸ್ಟಿಂಗ್ ತಂತ್ರಜ್ಞಾನದಲ್ಲಿ ನೈಪುಣ್ಯತೆ ಸಾಧಿಸಿದ್ದ ಭಾರತದ ಮೊದಲ ಉದ್ಯಮಿ ಅವರು. ಭಾರತದ ಎಲ್ಲಾ ವಿಧದ ವಾಹನಗಳಿಗೆ ಲೀಫ್ ಸ್ಪ್ರಿಂಗ್‌ಗಳನ್ನು ತಯಾರಿಸಲು ಆ ತಂತ್ರಜ್ಞಾನ ಅಗತ್ಯವಿತ್ತು. ಆ ಕಾಲದಲ್ಲಿ ಭಾರತದಲ್ಲಿ ತಯಾರಾಗುತ್ತಿದ್ದ ಪ್ರತಿಯೊಂದು ವಾಹನ ಕೂಡ ಕುಡ್ವ ಅವರ ಕೆನರಾ ಸ್ಪ್ರಿಂಗ್‌ಗಳನ್ನೇ ಬಳಸಿರುತ್ತಿತ್ತು.

ಕುಡ್ವ ಅವರು ಹೊಸ ಹೊಸ ರೀತಿಯ ಭಿನ್ನ ಉದ್ದಿಮೆಗಳನ್ನು ಸ್ಥಾಪಿಸಿದ್ದ 'ಟೆಕ್ನೋಕ್ರಾಟ್' ಉದ್ಯಮಿ. ಕೆನರಾದಲ್ಲಿ ಮೊದಲ ಬೃಹತ್ ಪ್ರಸಾರವುಳ್ಳ 'ನವಭಾರತ' ಕನ್ನಡ ದಿನ ಪತ್ರಿಕೆಯನ್ನೂ ಅವರು ಸ್ಥಾಪಿಸಿದ್ದರು. ಅದನ್ನು ಮುದ್ರಿಸಲು ಅಮೆರಿಕದಿಂದ ಆಮದು ಮಾಡಿಕೊಂಡ ರೋಟರಿ ಯಂತ್ರ ಅಳವಡಿಸಿದ್ದರು. ಅವರು 'ಮೋಟಾರು ಯಂತ್ರ ಜ್ಞಾನ' ಎಂಬ ಪುಸ್ತಕ ಕೂಡ ಬರೆದಿದ್ದರು. ಬಹುಶಃ ಆಟೋಮೊಬೈಲ್ ಎಂಜಿನಿಯರಿಂಗ್ ಕುರಿತು ಕನ್ನಡದಲ್ಲಿ ಬಂದ ಮೊದಲ ಪುಸ್ತಕವದು.

ಕುಡ್ವ ಅವರ ಆಟೋಮೊಬೈಲ್ ಉದ್ದಿಮೆ ಉತ್ತುಂಗದಲ್ಲಿದ್ದಾಗ ಮದ್ರಾಸ್‌ನ ಟಿವಿಎಸ್ ಸಮೂಹಕ್ಕೆ ದೊಡ್ಡ ಪೈಪೋಟಿ ನೀಡುತ್ತಿತ್ತು. ಆದರೆ ನಂತರದ ವರ್ಷಗಳಲ್ಲಿ ಟಿವಿಎಸ್ ಸಮೂಹ ಬೆಳೆಯುತ್ತಾ ಹೋದರೆ, ಕುಡ್ವ ಅವರ ಸಾವಿನ ನಂತರ ಕೆನರಾ ಕಂಪನಿಗಳು ಅವಸಾನದತ್ತ ಸಾಗಿದವು.

ಹುಲಿಯ ಚರ್ಮದ ಉಡುಗೊರೆ

ತಾತನ ಸ್ನೇಹಿತರಲ್ಲಿ ನನಗೆ ಅರ್ಥಮಾಡಿಕೊಳ್ಳಲು ಕಷ್ಟವಾಗಿದ್ದ ಇನ್ನೊಬ್ಬ ವ್ಯಕ್ತಿಯೆಂದರೆ ಉತ್ತರ ಕನ್ನಡದ ಮಂಚಿಕೇರಿಯ ಶ್ರೀಮಂತ ಜಮೀನ್ದಾರರಾಗಿದ್ದ ಹಾಸಣಗಿ ಗಣಪತಿ ಭಟ್ಟರು (1903–70). ಅವರಿಗೆ ದೊಡ್ಡ ಅಡಿಕೆ ತೋಟವಿತ್ತು. ಕಲೆ, ಸಾಹಿತ್ಯ ಹಾಗೂ ರುಚಿಯಾದ ಅಡುಗೆಗೆ ಅವರು ಪರಮ ಅಭಿಮಾನಿಯಾಗಿದ್ದರು. ಅವರು ಮತ್ತು ಅವರ ಅನೇಕ ಸಂಬಂಧಿಗಳು ಉತ್ತರ ಕನ್ನಡದ ಗುಡ್ಡಗಾಡು ಪ್ರದೇಶದಲ್ಲಿ 'ಸಾಲು ಮನೆ' ಎಂದು ಕರೆಸಿಕೊಳ್ಳುವ ಸಾಂಪ್ರದಾಯಿಕ ಒಂದೇ ಸೂರಿನ ಅಡಿಯ ಮನೆಯಲ್ಲಿ ವಾಸಿಸುತ್ತಿದ್ದರು. ಅದೊಂದು ವಿಶೇಷ ವಾಸ್ತುಶಾಸ್ತ್ರ ಪದ್ಧತಿಯಲ್ಲಿ ಮನೆಗಳನ್ನು ನಿರ್ಮಿಸುವ ವ್ಯವಸ್ಥೆ. ಅಲ್ಲಿ ಡಜನ್‌ಗಟ್ಟಲೆ ಮನೆಗಳನ್ನು ಒಂದಕ್ಕೊಂದು ಕೂಡಿಸಿ, ಒಂದೇ ಛಾವಣಿಯಡಿ ಸಾಲಾಗಿ ನಿರ್ಮಿಸುತ್ತಿದ್ದರು. ಎಲ್ಲಾ ಮನೆಗಳಿಗೂ ಸೇರಿ ಒಂದು ಉದ್ದದ ಚಾವಡಿಯಿರುತ್ತಿತ್ತು. ಸಾಮಾನ್ಯವಾಗಿ ಅದು 80 ಮೀಟರ್‌ಗೂ ಹೆಚ್ಚು ಉದ್ದವಿರುತ್ತಿತ್ತು. ಆ ಕಾಲದಲ್ಲಿ ಆಗಾಗ ಕೆನರಾ ಪ್ರದೇಶವನ್ನು ಲೂಟಿ ಮಾಡಲು ಬರುತ್ತಿದ್ದ ಮರಾಠರ ವಿರುದ್ಧ ಹೋರಾಡಲು ಜನರು ಈ ರೀತಿಯಲ್ಲಿ ಒಟ್ಟಾಗಿ ಮನೆ ಕಟ್ಟಿಕೊಳ್ಳುತ್ತಿದ್ದರು ಎಂದು ತಾತ ಹೇಳಿದ್ದರು.

ಹಾಸಣಗಿಗೆ ಹೋಗುವುದಕ್ಕೆ ನನಗೊಂದು ವಿಶೇಷ ಆಕರ್ಷಣೆಯಿತ್ತು. ಅದು, ಅಲ್ಲಿದ್ದ ಇಪ್ಪತ್ತೇಳು ಚಿರತೆ ಚರ್ಮಗಳು! ಅವುಗಳ ಪೈಕಿ ಎರಡು ಕಪ್ಪು ಚಿರತೆಯ ಚರ್ಮಗಳಿದ್ದವು. ಮಹಡಿಯ ಮೇಲೆ ಕುರ್ಚಿಗಳಿಗೆ ಎರಡು ಹುಲಿ ಚರ್ಮಗಳನ್ನು ಕೂಡ ಹಾಕಿದ್ದರು. ಅವೆಲ್ಲವೂ ಭಟ್ಟರು ಮತ್ತು ಸಂಬಂಧಿಗಳು ಅನೇಕ ವರ್ಷಗಳಲ್ಲಿ ಬೇಟೆಯಾಡಿದ್ದ ಪ್ರಾಣಿಗಳ ಚರ್ಮಗಳಾಗಿದ್ದವು. 1965 ರಲ್ಲಿ ಅವರ ಬಂಧುಗಳು ಕೊನೆಯ ಹುಲಿಯನ್ನು ಬೇಟೆಯಾಡಿ, ಅದರ ಚರ್ಮವನ್ನು ತಾತನಿಗೆ ಉಡುಗೊರೆ ನೀಡಿದ್ದರು. ಇವತ್ತಿಗೂ ಅದು ನನ್ನಲ್ಲಿದೆ. ಆ ಚರ್ಮದಿಂದ ತೆಗೆದು ಪರೀಕ್ಷಿಸಿದ ಡಿಎನ್‌ಎ ಇತ್ತೀಚೆಗೆ ಭಾರತದಲ್ಲಿ ಹುಲಿ ಸಂತತಿಯ ಇತಿಹಾಸವನ್ನು ಅರಿಯುವಲ್ಲೂ ಪ್ರಯೋಜನಕ್ಕೆ ಬಂದಿದೆ.

ತಾತನಿಗೆ ಇನ್ನೊಬ್ಬ ಅಡಿಕೆ ಬೆಳೆಗಾರ ಸ್ನೇಹಿತರಿದ್ದರು. ಅವರು ಪುತ್ತೂರು ಸಮೀಪ ನೆಲೆಸಿದ್ದ ಕುಪ್ಪಳುಚಾರ್ ಮರಿ ಭಟ್. ತಾತನಿಗಿಂತ ಕೆಲ ವರ್ಷ ದೊಡ್ಡವರು. ಬಹಳ ಶ್ರೀಮಂತ ಕೃಷಿಕ. ಆದರೆ ಅಸ್ತವ್ಯಸ್ತವಾಗಿ ಬಟ್ಟೆ ತೊಡುತ್ತಿದ್ದರು. ಅವರ ಅಂಗಿ ಯಾವಾಗಲೂ ಮಾಸಲಾಗಿತ್ತು. ಬಿಳಿ ಮುಂಡು ಉಡುತ್ತಿದ್ದರು. ಅದರ ಹಿಂದಿನಿಂದ ಲಂಗೋಟಿಯ ಬಾಲ ಜೋತಾಡುವುದು ಕಾಣುತ್ತಿತ್ತು. ಆದರೆ ಭಟ್ಟರ ಅಸ್ತವ್ಯಸ್ತ ನೋಟದ ಹಿಂದೊಂದು ಕುತೂಹಲಕರ ವ್ಯಕ್ತಿತ್ವವಿತ್ತು.

ಮರಿ ಭಟ್ ಆಗಾಗ ಬಾಲವನಕ್ಕೆ ಬರುತ್ತಿದ್ದರು. ಅಲ್ಲಿ ಗಂಟೆಗಟ್ಟಲೆ ಕುಳಿತು ತಾತನೊಂದಿಗೆ ಜಗತ್ತಿನ ಎಲ್ಲಾ ವಿಷಯಗಳ ಬಗ್ಗೆಯೂ ಮಾತನಾಡುತ್ತಿದ್ದರು. ತಾತ ಮೆತ್ತಗೆ ಅವರಿಂದ ತಪ್ಪಿಸಿಕೊಂಡು ತಮ್ಮ ಬರೆಯುವ ಮೇಜಿಗೆ ಪರಾರಿಯಾಗುತ್ತಿದ್ದಂತೆ ಮರಿ ಭಟ್ಟರ ಗಮನ ಅಮ್ಮನತ್ತ ಹರಿಯುತ್ತಿತ್ತು. ನಂತರ ಅಮ್ಮನ ಜತೆ ಹರಟೆ ಹೊಡೆಯುತ್ತಿದ್ದರು. ಅವರೆಷ್ಟೇ ಗ್ರಾಮ್ಯ ವ್ಯಕ್ತಿಯಾಗಿದ್ದರೂ ಅಂತಾರಾಷ್ಟ್ರೀಯ ವ್ಯವಹಾರಗಳ ಬಗ್ಗೆ ಚೆನ್ನಾಗಿ ಓದಿಕೊಂಡಿದ್ದರು. ಆಗಲೇ ಮುಗಿದಿದ್ದ ಎರಡನೇ ವಿಶ್ವ ಮಹಾಯುದ್ಧದ ಬಗ್ಗೆ ಅವರಿಗೆ ಸಿಕ್ಕಾಪಟ್ಟೆ ಕುತೂಹಲ ಮತ್ತು ತಿಳುವಳಿಕೆ ಎರಡೂ ಇತ್ತು. ಜರ್ಮನಿಯ ಫೀಲ್ಡ್ ಮಾರ್ಷಲ್‌ಗಳಾದ ಗರ್ಡ್ ಫಾನ್ ರುಂಡ್‌ಸ್ಟೆಟ್ ಹಾಗೂ ಎರ್ವಿನ್ ರೋಮೆಲ್ ಅವರ ರಣತಂತ್ರಗಳ ಬಗ್ಗೆ ಬಹಳ ಅಧಿಕಾರಯುತವಾಗಿ ಗಂಟೆಗಟ್ಟಲೆ ಅವರು ಮಾತನಾಡುವುದನ್ನು ನಾನು ಬಾಯಿತೆರೆದು ಕೇಳಿಸಿಕೊಂಡಿದ್ದು ಇವತ್ತಿಗೂ ನೆನಪಿದೆ. ಮಧ್ಯೆ ಮಧ್ಯೆ ಸಣ್ಣದೊಂದು ಬ್ರೇಕ್ ತೆಗೆದುಕೊಂಡು, ಜಗಲಿಂದ ಹೋಗಿ, ಬಾಯಿಯಲ್ಲಿದ್ದ ಅಗಾಧ ಪ್ರಮಾಣದ ರಕ್ತಗೆಂಪು ಕವಳದ ರಸವನ್ನು ಚಿಮ್ಮಿಸಿ ಉಗುಳಿ ಮತ್ತೆ ಮಿಲಿಟರಿ ಇತಿಹಾಸದ ಕುರಿತ ಉಪನ್ಯಾಸವನ್ನು ಮುಂದುವರಿಸುತ್ತಿದ್ದರು.

ಕಾರಂತ ಕುಟುಂಬಕ್ಕೆ ಬಹಳ ಹತ್ತಿರವಾಗಿದ್ದ ಇನ್ನೊಬ್ಬ ಸುಸಂಸ್ಕೃತ ವ್ಯಕ್ತಿಯೆಂದರೆ ಅಗ್ರಾಳ ಪುರಂದರ ರೈ. ಪುಣಚದ ಹಳ್ಳಿಯಲ್ಲಿ ವಾಸಿಸುತ್ತಿದ್ದ ಪ್ರಗತಿಪರ ಕೃಷಿಕ, ಬರಹಗಾರ, ಕವಿ ಮತ್ತು ಪತ್ರಕರ್ತ. ತುಂಬಾ ಎತ್ತರದ ಆಳು. ಆಳವಾದ ಗಡಸು ಧ್ವನಿಯಿಂದ ಎದ್ದು ತೋರುತ್ತಿದ್ದ ವ್ಯಕ್ತಿ. ಅವರ ಜತೆಗೆ ಸಾಹಿತ್ಯ ಹಾಗೂ ಜಾನಪದ ಕಲೆಯ ಬಗ್ಗೆ ಚರ್ಚಿಸುವುದು ತಾತನಿಗೆ ಬಹಳ ಇಷ್ಟದ ವಿಷಯವಾಗಿತ್ತು. ನಡುವೆ ರೈ ತಾವೇ ಬರೆದ ಕವನಗಳನ್ನು ಓದುತ್ತಿದ್ದರು. ಅವರ ಮಗ ವಿವೇಕ ರೈ ಶಾಲೆಯಲ್ಲಿ ನನಗಿಂತ ಕೆಲ ವರ್ಷ ದೊಡ್ಡವರು. ನಂತರ ಪ್ರಸಿದ್ಧ ಕನ್ನಡ ಪಂಡಿತರಾಗಿ, ಶಿಕ್ಷಣ ತಜ್ಞರಾಗಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿ ನಿವೃತ್ತರಾದರು.

ಪುತ್ತೂರಿನ ವಕೀಲರೂ, ಇಂಗ್ಲಿಷ್ ಕಾವ್ಯದಲ್ಲಿ ಕೈಯಾಡಿಸುತ್ತಿದ್ದ ಕವಿಗಳೂ ಆಗಿದ್ದ ಬೆಳ್ಳೆ ರಾಮಚಂದ್ರ ರಾವ್ ಆಗಾಗ ಸಾಹಿತ್ಯದ ಬಗ್ಗೆ ಮಾತನಾಡಲು ತಾತನಲ್ಲಿಗೆ ಬರುತ್ತಿದ್ದರು. ರಾವ್ ಅವರು ಯಾವತ್ತೂ ಇಂಗ್ಲೆಂಡಿಗೆ ಹೋಗಿರದಿದ್ದರೂ ಅವರು ಬರೆಯುವ ಕತೆಗಳೆಲ್ಲ ಸಾಮಾನ್ಯವಾಗಿ ಡ್ಯಾಫೋಡಿಲ್ ಹೂವುಗಳ ಸೌಂದರ್ಯ ಹಾಗೂ ಬ್ರಿಟನ್ನಿನ ಹಳ್ಳಿಗಳ ಮಾಧುರ್ಯಗಳ ಬಗ್ಗೆಯೇ ಇರುತ್ತಿದ್ದವು.

ಸಾಧು ಗೆಳೆಯರ ಗ್ಯಾಂಗ್

ಇವರೆಲ್ಲರ ಹೊರತಾಗಿ ತಾತನಿಗೆ ದಿನನಿತ್ಯದ ಹಳೆಯ ಗೆಳೆಯರದ್ದೊಂದು 'ಗ್ಯಾಂಗ್' ಇತ್ತು. ಬಹುಶಃ ಈ ಸಾಧು ಗೆಳೆಯರ ಕೂಟಕ್ಕೆ 'ಗ್ಯಾಂಗ್' ಎಂಬ ಪದ ಬಳಸಿದರೆ ಕಠೋರವಾದೀತು. ಅಷ್ಟು ಸೌಮ್ಯ, ಎಲ್ಲರೂ ಐವತ್ತು ಹಾಗೂ ಅರವತ್ತರಲ್ಲಿದ್ದ ಸ್ನೇಹಿತರ ಕೂಟವದು. ಪ್ರತಿದಿನ ಸಂಜೆ ತಾತ ಬಾಲವನದಿಂದ ಪುತ್ತೂರು ಪಟ್ಟಣಕ್ಕೆ ನಡೆದಾಟಕ್ಕೆ ಹೋಗುತ್ತಿದ್ದರು. ಅಲ್ಲಿ ಅವರ ಸ್ನೇಹಿತ ಶ್ರೀಧರ ಭಟ್ಟರ ಅಂಗಡಿಯ ಒಂದು ಮೂಲೆಯಲ್ಲಿದ್ದ ದೊಡ್ಡ ಜಾಗದಲ್ಲಿ ಟೇಬಲ್ ಸುತ್ತ ಇವರೆಲ್ಲರೂ ಕುಳಿತು ಹರಟೆ ಹೊಡೆಯುತ್ತಿದ್ದರು. ಮಧ್ಯೆ ಒಂದು ಕಪ್ ಚಹಾ. ಪ್ರಚಲಿತ ವಿದ್ಯಮಾನಗಳ ಚರ್ಚೆ. ನಂತರ ಎಲ್ಲರೂ ಅವರವರ ಮನೆಗೆ. ತಾತ ಮುಂಬೈನಿಂದ ಬರುತ್ತಿದ್ದ ಹಿಂದಿನ ದಿನದ ದಿ ಟೈಮ್ಸ್ ಆಫ್ ಇಂಡಿಯಾ ಹಿಡಿದು ಮನೆಯತ್ತ ಹೆಜ್ಜೆ ಹಾಕುತ್ತಿದ್ದರು. ನಾನು ಅದರ ಕೊನೆಯ ಪುಟದಲ್ಲಿರುತ್ತಿದ್ದ ಎಡ್ಗರ್ ರೈಸ್ ಬರೋ ಅವರ ಟಾರ್ಜಾನ್ ಕಾಮಿಕ್ಸ್ ಓದಲು ಕಾತರಿಸಿ ಕಾಯುತ್ತಿದ್ದೆ.

ತಾತನ ಈ 'ಗ್ಯಾಂಗ್'ನಲ್ಲಿದ್ದ ಒಬ್ಬ ಸ್ನೇಹಿತ ಅಡೆಮನೆ ಪಲತ್ತಡ್ಕ (ಎ.ಪಿ.) ಸುಬ್ಬಯ್ಯ. ಸಾಹಿತ್ಯದ ಅಭಿಮಾನಿ. ಸಣಕಲು ಮನುಷ್ಯ. ಅವರಿಗೆ ತನಗೇನೋ ಅನಾರೋಗ್ಯ ಎಂಬ ಭ್ರಮೆ. ಯೌವನದಲ್ಲಿ ಅವರು ಒಳ್ಳೆಯ ಹಾಕಿ ಆಟಗಾರನಾಗಿದ್ದು, ಕೊಡಗನ್ನು ಪ್ರತಿನಿಧಿಸಿ ಆಡುತ್ತಿದ್ದರಂತೆ. ಅವರಿಗೆ ಪಾಶ್ಚಾತ್ಯ ಕ್ಲಾಸಿಕ್‌ಗಳನ್ನು ಕನ್ನಡಕ್ಕೆ ಅನುವಾದ ಮಾಡುವ ಹವ್ಯಾಸವಿತ್ತು. 'ಲೆ ಮಿಸರೆಬಲ್ಸ್', 'ದಿ ಕಾರ್ ಆಫ್ ವೇಕ್‌ಫೀಲ್ಡ್', 'ಡೇವಿಡ್ ಕಾಪರ್‌ಫೀಲ್ಡ್' ಮುಂತಾದ ಅನೇಕ ಪ್ರಸಿದ್ಧ ಕೃತಿಗಳನ್ನು ಅನುವಾದ ಮಾಡಿದ್ದರು. ಕಾರಂತ ಮತ್ತು ಎ.ಪಿ. ಕುಟುಂಬದ ನಡುವಿನ ಸ್ನೇಹ ಈಗ ಮೂರನೇ ತಲೆಮಾರಿಗೂ ಮುಂದುವರಿದಿದೆ.

ಆ ಗುಂಪಿನ ಇನ್ನೊಬ್ಬ ನಿಯಮಿತ ಸದಸ್ಯನೆಂದರೆ ಸಾರಸ್ವತ ಹೈಸ್ಕೂಲ್ ಶಿಕ್ಷಕರಾಗಿದ್ದ ತಡಗಜೆ ನಾಗೇಶ್ ರಾವ್. ತುಂಬಾ ಮೃದು ವ್ಯಕ್ತಿ. 1922 ರಲ್ಲಿ ತಾತ ಮಂಗಳೂರಿನಲ್ಲಿ ಸ್ವಾತಂತ್ರ್ಯ ಹೋರಾಟದತ್ತ ಸೆಳೆಯಲ್ಪಟ್ಟಿದ್ದಾಗ ರಾವ್ ಆಗಿನ್ನೂ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದರಂತೆ. ಆಗಿನಿಂದಲೇ ಅವರು ತಾತನ ಪ್ರಭಾವಲಯಕ್ಕೆ ಸೇರಿಕೊಂಡಿದ್ದರು. ತಾತ ಕೆಲವೊಮ್ಮೆ ಅವರಿಗೆ ಸಂಜೆ ಮನೆಗೆ ಹೋಗಲು ಬಿಡದೆ ಒತ್ತಾಯ ಮಾಡಿ ಬಾಲವನಕ್ಕೆ ಕರೆದುಕೊಂಡು ಬರುತ್ತಿದ್ದರು. ಮನೆಯೊಳಗೆ ಕಾಲಿಡುತ್ತಿದ್ದಂತೆ ತಾತ ಅಮ್ಮನನ್ನು ಕರೆದು, 'ಲೀಲಾ ಹೊರಗೆ ಬಾ. ಸಾಧುಗಳು ಇವತ್ತು ರಾತ್ರಿ ಊಟಕ್ಕೆ ಬಂದಿದ್ದಾರೆ' ಎಂದು ಹೇಳುತ್ತಿದ್ದರು. ನಾಗೇಶ್ ರಾವ್ ತುಂಬಾ ಸಾತ್ವಿಕ ಹಾಗೂ ದೈವಭಕ್ತ ಮನುಷ್ಯ. ಅವರು ಮತ್ತು ಅಮ್ಮ ಗಂಟೆಗಟ್ಟಲೆ ಧಾರ್ಮಿಕ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದರು. ಅವರ ತಡಗಜೆ ಮನೆಯಲ್ಲಿ ವರ್ಷಕ್ಕೊಮ್ಮೆ ಗಣೇಶ ಚೌತಿಗೆ ನಡೆಯುತ್ತಿದ್ದ ಅದ್ದೂರಿ ಪೂಜೆಗಾಗಿ ನಾನು ಹಾಗೂ ಕ್ಷಮಾ ಕಾಯುತ್ತಿದ್ದೆವು. ಅಲ್ಲಿ ಎರಡು ಗಣೇಶರನ್ನು ಕೂರಿಸಿ, ಜೋರಾಗಿ ಪೂಜೆ ಮಾಡಿ, ಪರಮಾದ್ಭುತ ಊಟದ ಸಮಾರಾಧನೆಯಾಗುತ್ತಿತ್ತು.

ತಾತನ ಗುಂಪಿನ ಮೂರನೇ ಶಾಶ್ವತ ಸದಸ್ಯ ಕಲ್ಯಾಣಪುರ ಭವಾನಿಶಂಕರ ರಾವ್. ತುಂಬಾ ಎತ್ತರದ ವ್ಯಕ್ತಿ. ನಿವೃತ್ತ ಹೆಡ್‌ಮಾಸ್ಟರ್. ಅವರ ಮಗ ಗೋಪಿನಾಥ ಕಲ್ಯಾಣಪುರ ಪ್ರಸಿದ್ಧ ಸಂಖ್ಯಾಶಾಸ್ತ್ರಜ್ಞನಾಗಿ ಅಮೆರಿಕದಲ್ಲಿ ನೆಲೆಸಿದ್ದರು. ಕೆಲವು ವರ್ಷ ಅವರು ಇಂಡಿಯನ್ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್‌ಗೆ ನಿರ್ದೇಶಕರೂ ಆಗಿದ್ದರು. ತಾತ ಬಹಳ ವರ್ಷಗಳ ನಂತರ ಅಮೆರಿಕಕ್ಕೆ ಹೋದಾಗ ಗೋಪಿ ಕಲ್ಯಾಣಪುರ ಬಿಡುವು ಮಾಡಿಕೊಂಡು ತಾತನನ್ನು ಕಾರಿನಲ್ಲಿ ಗ್ರ್ಯಾಂಡ್ ಕ್ಯಾನ್ಯನ್ ಮುಂತಾದ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದುಕೊಂಡು ಪ್ರವಾಸ ಹೋಗಿದ್ದರು.

2004 ರಲ್ಲಿ ನಾನು ಅಮೆರಿಕದ ನಾರ್ತ್ ಕೆರೋಲಿನಾಕ್ಕೆ ಹೋದಾಗ ಚಾಪೆಲ್ ಹಿಲ್‌ನಲ್ಲಿ 'ಗೋಪಿಯಣ್ಣ'ನನ್ನು ನೋಡಲು ಹೋಗಿದ್ದೆ. ಅವರಿಗೆ ಆಶ್ಚರ್ಯವಾಗಿತ್ತು. ಮೂರು ದಶಕಗಳ ಹಿಂದೆ ಅವರು ನೋಡಿದ್ದ ಹುಡುಗ ಉಲ್ಲಾಸಗೂ ಈಗ ಅವರೆದುರು ನಿಂತಿದ್ದ ಐವತ್ತಾರು ವರ್ಷದ ವ್ಯಕ್ತಿಗೂ ಯಾವುದೇ ಹೋಲಿಕೆಯೇ ಇರಲಿಲ್ಲ.

ಮುಂದುವರಿಯುವುದು...

ಪದಬಂಧ



ಎಡದಿಂದ ಬಲಕ್ಕೆ:

1. ನಡೆಯಲು ಸಾಧ್ಯವಿಲ್ಲದುದು (4)
3. ನಾನು, ನನ್ನದೆಂಬ ಭಾವ (4)
5. ಫಿರಂಗಿ ಮದ್ದು ಆರಂಭದಲ್ಲಿ ದೀರ್ಘವಾಗಿದೆ (3)
6. ಮನಸ್ಸಿನ ವ್ಯಥೆ, ಚಿಂತೆ (3)
7. ಒಂದೆಡೆಯಿಂದ ಮತ್ತೊಂದೆಡೆಗೆ ಕಳುಹಿಸುವುದು (3)
9. ನಟನೆ ನಯವಾಗಿದೆ (4)
10. ಮೆಲ್ಲನೇ ಕಿವಿಯಲ್ಲಿ ಹೇಳುವ ನುಡಿ (4)
11. ಎತ್ತ ಕಡೆಯಿಂದ ನೋಡಿದರೂ ಹೊಸತು (3)
13. ವೈದ್ಯರು ನೀಡುವ ಔಷಧಿ (3)
15. ನಕಲು ಅಥವಾ ಕಚ್ಚಾ ಪ್ರತಿ (3)
17. ಶಕ್ತಿವಂತ (4)
18. ಮಹಾತ್ಮಾ ಗಾಂಧಿಯ ನಾಡಿನಿಂದ ಬಂದವನು (4)

ಮೇಲಿನಿಂದ ಕೆಳಕ್ಕೆ:

1. ನೀರಿನಲ್ಲಿ ಉಂಟಾದ ತೆರೆ (2)
2. ಮನೆಯ ಮುಂದಿನ ಮೊಗಸಾಲೆ (3)
3. ಕರಪಿಡಿದು ಬಂದಿದೆ ಮೊಸಳೆ (3)
4. ಮೋಟಾರು ವಾಹನ ಸಂಚರಿಸುವ ಮಾರ್ಗ (2)
6. ಒಣಹೆಮ್ಮೆಯ ಪರ್ಯಾಯ ಪದ (5)
8. ಭೂಮಿಯ ಅಡಿಯಲ್ಲಿರುವ ಮನೆ (5)
12. ಅಸಲಿಯಲ್ಲದ್ದು ನಲಿಯುತ್ತ ಬಂದಿದೆ (3)
13. ಮಿಂಚಿನ ಜೊತೆಗೆ ಬಂದಿರುವ ದೊಡ್ಡ ಸದ್ದು (3)
14. ಅವಿವೇಕಿ ಅಥವಾ ದಡ್ಡ (2)
16. ಪಾಂಡವರ ತಾಯಿ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಗೊಗ್ಗರು 2. ಸಮೋಸ 4. ಸಾರ 6. ವಿಷ 7. ಕಸಿವಿಸಿ 9. ಲಯ 10. ನಾಕ 11. ಗೊಣುಹಾಕು 13. ವೈರಿ 14. ದಿಟ್ಟ 15. ಕಣಿವೆ 16. ಕಂಬನಿ

ಮೇಲಿನಿಂದ ಕೆಳಕ್ಕೆ: 1. ಗೊರವಂಕ 3. ಸವಿನಯ 5. ಕನಸಿನಗೋಪುರ 8. ಸಿಡುಕ 9. ಲಗಾಾ 10. ನಾಗರಿಕ 12. ಕುಮುದಿನಿ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಅಪರೂಪದ ವ್ಯಕ್ತಿತ್ವದ ಶ್ರೀ ಟಿ ಎಸ್ ವೆಂಕಣ್ಣಯ್ಯನವರು

ಒಂದೊಳ್ಳೆ ಮಾತು



ರೂಪಾ ಗುರುರಾಜ್
rgururaj628@gmail.com

ಶ್ರೀ ಟಿ ಎಸ್ ವೆಂಕಣ್ಣಯ್ಯನವರು ಮೈಸೂರು ವಿಶ್ವವಿದ್ಯಾಲಯದ ಮೊದಲನೆಯ ಕನ್ನಡ ಪ್ರೊಫೆಸರ್ ಆಗಿದ್ದರು. ಅವರು ಕುವೆಂಪು ಅವರಿಗೆ ಗುರುಗಳು ಕೂಡಾ. ನಾನು ದೇವರನ್ನು ನೋಡಿಲ್ಲ, ಆದರೆ ದೇವರಂಥ ವೆಂಕಣ್ಣಯ್ಯನವರನ್ನು ಮಾತ್ರ ನೋಡಿರುವೆ ಎನ್ನುತ್ತಾರೆ ಕುವೆಂಪು ಅವರು. ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಕುವೆಂಪುರವರು ಅರ್ಪಣೆ ಮಾಡಿರುವುದು, ತಮ್ಮ ಗುರು ವೆಂಕಣ್ಣಯ್ಯನವರಿಗೇ.

ಇನ್ನೊಂದು ಸಂದರ್ಭದಲ್ಲಿ ಕುವೆಂಪು ಅವರು ಹೇಳಿರುವ ಮಾತು ಬಹಳ ಮಹತ್ವದ್ದು. ಗುರು ವೆಂಕಣ್ಣಯ್ಯನವರು, ರಾಮಾಯಣ ದರ್ಶನಂ ಮಹಾಕಾವ್ಯವನ್ನು ಓದುವಷ್ಟರಲ್ಲಿ ನಿಧನರಾದರು. ಅವರೇನಾದರೂ ಇದನ್ನು ಓದಿದ್ದರೆ, ಈ ಮಹಾಕಾವ್ಯ ಪ್ರಕಟವಾಗದಿದ್ದರೂ ಕೂಡ ನಾನು ಹೆಚ್ಚು ಯೋಚಿಸುತ್ತಿರಲಿಲ್ಲ. ಏಕೆಂದರೆ ನನಗೆ ಅವರೆಂದರೆ, ಒಂದು ಕೋಟಿ ಕನ್ನಡ ಸಹೃದಯರಿಗೆ ಸಮ, ಎಂದು ಹೇಳಿದ್ದಾರೆ ಕುವೆಂಪುರವರು.

ಕೆ ಎಸ್ ನರಸಿಂಹಸ್ವಾಮಿಯವರು, ಇದೇ ವೆಂಕಣ್ಣಯ್ಯನವರನ್ನು ಕಲ್ಪವೃಕ್ಷಕ್ಕೆ ಹೋಲಿಸಿ ಪದ್ಯ ಬರೆದಿದ್ದಾರೆ. ವೆಂಕಣ್ಣಯ್ಯನವರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಅವರು ಮೈಸೂರಿನ ನೆಲದ ಮೇಲೆ ಓಡಾಡಿದ ಮಹಾನುಭಾವರು, ಮಹಾತ್ಮರು ಕೂಡ.

ವೆಂಕಣ್ಣಯ್ಯನವರು ತೀರಿಕೊಳ್ಳುವುದಕ್ಕೆ ಸುಮಾರು ನಾಲ್ಕು ತಿಂಗಳ ಮೊದಲು, ಅವರ ಮನೆಯಲ್ಲಿ, ಭಾರಿ ಕಳ್ಳತನವಾಯಿತು. ಕಳ್ಳರು, ಉಟ್ಟ ಬಟ್ಟೆಯನೊಂದನುಳಿದು ಮತ್ತೇನನ್ನೂ ಬಿಟ್ಟಿರಲಿಲ್ಲ. ಮಲಗಿದ್ದ ವೆಂಕಣ್ಣಯ್ಯನವರನ್ನು ಯಾರೋ ಮಹಾನುಭಾವರು ಎಬ್ಬಿಸಿ, ಕಳ್ಳತನವಾಗಿರುವ ವಿಷಯವನ್ನು ಅವರಿಗೆ ತಿಳಿಸಿದರು. ಆಗ ಅವರು ಸ್ವಲ್ಪವೂ ತಲೆಕೆಡಿಸಿಕೊಳ್ಳದೆ ಸ್ಥಿತ ಪ್ರಜ್ಞರಂತೆ ಇದ್ದರು.

'ಇವನ್ಯಾರೋ, ದೊಡ್ಡ ಪ್ರೊಫೆಸರ್ ಎಂದು ನಮ್ಮ ಮನೆ ಕಳ್ಳತನ ಮಾಡಲು ಬಂದಿದ್ದಾರೆ. ನಮ್ಮ ಮನೆ ಪೆಟ್ಟಿಗೆ ಬೀರುಗಳನ್ನೆಲ್ಲ ತೆಗೆದು ಹುಡುಕಿ, ಇವನ್ಯಾವ ಸೀಮೆ ಪ್ರೊಫೆಸರ್? ನಮಗಿಂತ ದರಿದ್ರದವನು ಎಂದು ನನ್ನನ್ನು ಬೈದುಕೊಂಡು ಹೋಗಿರಬೇಕು ಆ ಕಳ್ಳರು, ಎಂದು ನಗುತ್ತಾ ಹೇಳಿದರಂತೆ ವೆಂಕಣ್ಣಯ್ಯನವರು.

ದೇವರ ಬೆಳ್ಳಿ ಪ್ರತಿಮೆಗಳನ್ನೆಲ್ಲಾ ಕದ್ದುಕೊಂಡು ಹೋಗಿದ್ದಾರೆ, ಎಂದು ಯಾರೋ ಹೇಳಿದಾಗ, 'ದೇವರು ಬೆಳ್ಳಿ ಬಂಗಾರದಲ್ಲಿ ಕಾಣಿಸಿಕೊಂಡರೆ ಅವನಿಗೆ ಇದೇ ಗತಿ' ಎಂದು ಹೇಳಿ ನಕ್ಕರಂತೆ. ನೀವು ಊಟ ಮಾಡುತ್ತಿದ್ದ, ಬೆಳ್ಳಿತಟ್ಟೆ ಹೋಯಿತಲ್ಲ ಎಂದು ಯಾರೋ ಹೇಳಿದಾಗ, 'ನಾನು ಅಲ್ಯೂಮಿನಿಯಂ ತಟ್ಟೆಯಲ್ಲೇ ಊಟ ಮಾಡುತ್ತೇನೆ ಅಂದಿದ್ದೆ, ಆದರೆ ಮನೆಯವರು ನನಗೆ ಅಂತ ಬೆಳ್ಳಿ ತಟ್ಟೆ ಇಟ್ಟಿದ್ದರು, ಈಗ ಅದೂ ಒಳ್ಳೆಯದೇ ಆಯಿತು. ನನಗೆ ಈಗ ಅಲ್ಯೂಮಿನಿಯಂ ತಟ್ಟೆಯಲ್ಲಿ ತಿನ್ನುವ ಯೋಗ ದೊರಕಿತು. ಅಲ್ಯುಮಿನಿಯಂ ತಟ್ಟೆಯಲ್ಲಿ ತಿಂದರೆ ಊಟದ ರುಚಿಯಲ್ಲಿ, ಯಾವ ವ್ಯತ್ಯಾಸವೂ ಆಗುವುದಿಲ್ಲ' ಎಂದು ಹೇಳಿದರಂತೆ.

ಇವರ ಮನೆಯಲ್ಲಿ ಕಳ್ಳತನವಾದ ದಿನ ಅವರ ಮಗನ ಹುಟ್ಟುಹಬ್ಬ. ವೆಂಕಣ್ಣಯ್ಯನವರು ಅವರ ಮನೆಯ ಕಳ್ಳತನದ ಬಗ್ಗೆ ಸ್ವಲ್ಪವೂ ತಲೆಕೆಡಿಸಿಕೊಳ್ಳದೆ, ಮನೆಗೆ ಬಂದವರಿಗೆಲ್ಲಾ ಹೋಳಿಗೆ ಪಾಯಸದ ಊಟ ಹಾಕಿಸಿದರು. ಇದು ಪುಣ್ಯಾತ್ಮರಾದ ಮೈಸೂರಿನ ವೆಂಕಣ್ಣಯ್ಯನವರು ಬದುಕಿದ ರೀತಿ.

ಇಂತಹ ದೊಡ್ಡ ಮನುಷ್ಯರ ಸಾತ್ವಿಕ ಜೀವನ ಅವರು ಜೀವಿಸಿದರೆ ಸಂಸ್ಕಾರ ಜೀವನವನ್ನು ಒಂದು ನಿರ್ಲಿಪ್ತ ಮನಸ್ಥಿತಿಯಿಂದ ಅವರು ನೋಡಿದ ರೀತಿ ಇದೆಲ್ಲವೂ ನಾವು ಇಂದಿನವರು ಕಲಿಯಬೇಕಾದ ದೊಡ್ಡ ಪಾಠಗಳು. ನಾನು, ನನ್ನದು ಎನ್ನುವ ಸ್ವಾರ್ಥದಲ್ಲಿ ದಿನ ದಿನವೂ ನಮ್ಮ ನೆಮ್ಮದಿಯನ್ನು ಹಾಳು ಮಾಡಿಕೊಂಡು ಬಳಲುತ್ತಿರುತ್ತೇವೆ. ವಿದ್ಯೆ ಹೆಚ್ಚಾದಂತೆಲ್ಲ ವಿವೇಕ ಹೆಚ್ಚಾಗಬೇಕು. ಇಂತಹ ವಿವೇಕ ನಮಗೆ ಬದುಕಿನಲ್ಲಿ ನಿರ್ಲಿಪ್ತತೆಯನ್ನು ಕಲಿಸಿಕೊಡಬೇಕು.

ಆಗ ನಾವು ನಮ್ಮಲ್ಲಿರುವ ಹೆಚ್ಚಾದ ಹಣ , ಅನುಕೂಲಗಳನ್ನು ನಿರ್ಗತಿಕರಿಗೆ ನಿಜವಾಗಲೂ ಅಗತ್ಯವಿರುವವರಿಗೆ ಹಂಚುವ ದೊಡ್ಡ ಮನಸ್ಸು ಮಾಡುತ್ತೇವೆ. ಆಗ ಪ್ರಪಂಚದಲ್ಲೂ ಇರುವವರ ಮತ್ತೆ ಇಲ್ಲದವರ ನಡುವೆ ಒಂದು ಸಮತೋಲನ ಸೃಷ್ಟಿಯಾಗಲು ಸಾಧ್ಯ. ವಿದ್ಯೆಯ ಉದ್ದೇಶವೇ ಅದಲ್ಲವೆ? ಎಲ್ಲಾದರೂ ಮತ್ತೊಬ್ಬರ ನೋವುಗಳಿಗೆ ಸ್ಪಂದಿಸೋಣ, ಅಗತ್ಯಕ್ಕಿಂತ ಹೆಚ್ಚು ಶೇಖರಿಸಿಕೊಳ್ಳದೆ ಬದುಕೋಣ.